ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಶಾಖೆ / ವಿಷಯ: DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER : ಸಂಯುಕ್ತ ಕರ್ನಾಟಕ    ದಿನಾಂಕ : DATE : 2/11/2019

# ಅನರ್ಹರ ತ್ಯಾಗದ ಫಲವೇ ಈ ಸರ್ಕಾರ

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪಕ್ಷದ ಕೋರ್ ಕಮಿಟಿ ಸಭೆಯಲ್ಲಿ ಅನರ್ಹ ಶಾಸಕರ ಪರವಾಗಿ ಮಾತನಾಡಿದ್ದಾರೆ. ಅವರಿಗೆ ಟಿಕೆಟ್ ನೀಡಬಾರದು ಎಂದು ಹೇಳುತ್ತಿರುವ ಪಕ್ಷದ ಮುಖಂಡರ ವಿರುದ್ಧ ಹರಿಹಾಯ್ದಿದ್ದಾರೆ.

ಡಿಸೆಂಬರ್ 5ರಂದು ನಡೆಯಲಿರುವ ಹದಿನೈದು ಕ್ಷೇತ್ರಗಳ ವಿಧಾನಸಭೆ ಉಪಚುನಾವಣೆ ಹಿನ್ನೆಲೆಯಲ್ಲಿ ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ನಡೆದ ಪಕ್ಷದ ಕೋರ್ ಕಮಿಟಿ ಸಭೆಯಲ್ಲಿ ಅನರ್ಹರ ವಿರುದ್ಧ ಮಾತನಾಡುತ್ತಿರುವ ಮುಖಂಡರನ್ನು ಯಡಿಯೂರಪ್ಪ ತರಾಟೆಗೆ ತೆಗೆದುಕೊಂಡಿದ್ದು ಎನ್ನಲಾದ ಆಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ಅದನ್ನು ಅಲ್ಲಿದ್ದವರೇ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿ ಹರಿಯಬಿಟ್ಟ ಪ್ರಸಂಗ ಇದು ಎನ್ನಲಾಗಿದೆ. ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಸೇರಿದಂತೆ ಕೆಲವು ಮುಖಂಡರು ಅನರ್ಹರಿಗೂ ಬಿಜೆಪಿಗೂ ಸಂಬಂಧ ಇಲ್ಲ ಎಂದು ಬಹಿರಂಗ ಹೇಳಿಕೆ ನೀಡುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ತೀವ್ರ ಅಸಮಾಧಾನ ಸೂಚಿಸಿದ್ದಾರೆ.



# ಅನರ್ಹರ ತ್ಯಾಗದ ಫಲವೇ ಈ ಸರ್ಕಾರ

ಮೊದಲನೇ ಪುಟದಿಂದ....

ಅನರ್ಹರ ತ್ಯಾಗದ ಫಲವಾಗಿಯೇ ಇಂದು ನಾವು ಅಧಿಕಾರದಲ್ಲಿದ್ದೇವೆ. ನಮ್ಮನ್ನ ನಂಬಿದ ಅನರ್ಹರು ಮೂರ್ಖರಾಗಬಾರದು. ಅವರಿಗೆ ನಂಬಿಕೆ ದ್ರೋಹ ಆಗಬಾರದು. ಅವರನ್ನು ಗೆಲ್ಲಿಸಿ ಮರಳಿ ವಿಧಾನಸಭೆಗೆ ತರುವುದು ನಮ್ಮ ಗುರಿ ಆಗಬೇಕು. ಅವರು ರಾಜೀನಾಮೆ ಕೊಡುವ ಅಗತ್ಯವಾದರೂ ಏನಿತ್ತು. ನಮ್ಮನ್ನ ನಂಬಿ ಅವರು ರಾಜೀನಾಮೆ ನೀಡಿದ್ದಾರೆ. ಇದನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು ಎಂದು ಯಡಿಯೂರಪ್ಪ ಹೇಳಿದ್ದಾರೆ.

ಚುನಾವಣೆಯಲ್ಲಿ ಟಿಕೆಟ್ ನೀಡುವ ವಿಚಾರವಾಗಿ ಅನರ್ಹರಿಗೆ ಹೆಗಲು ಕೊಡುವ ಬದಲು ಅವರಿಗೆ ನೋವಾಗುವಂತ ಮಾತುಗಳನ್ನು ನಾವೇ ಆಡಿದರೆ ಅವರ ಪರಿಸ್ಥಿತಿ ಏನಾಗಬೇಕು. ನಮ್ಮನ್ನು ನಂಬಿ ಅವರು ಮೂರ್ಖರಾದಂತಾಗಲಿಲ್ಲವೇ ಎಂದು ಯಡಿಯೂರಪ್ಪ ಅವರ ಬೆಂಬಲಕ್ಕೆ ನಾವು ನಿಲ್ಲಬೇಕು ಎಂದು ಹೇಳಿದ್ದಾರೆ. ಸರಕಾರ ರಚನೆಗೆ ಮೂಲ ಕಾರಣಕರ್ತರಾದ ಅವರ (ಅನರ್ಹರು) ಬಗ್ಗೆ ಹಗುರವಾಗಿ ಮಾತನಾಡುವ ಮೂಲಕ ನಾವು ಏನು ಮಾಡಹೊರಟಿದ್ದೇವೆ ಎಂಬುದೇ ತಿಳಿಯುತ್ತಿಲ್ಲ. ನಿಮ್ಮಿಂದ ಇಂತಹ ಮಾತುಗಳನ್ನು, ವರ್ತನೆಯನ್ನು ನಾನು ನಿರೀಕ್ಷಿಸಿರಲಿಲ್ಲ ಎಂದಿದ್ದಾರೆ.

ಒಬ್ಬೊಬ್ಬರು ಒಂದೊಂದು ಮಾತನಾಡುವುದರಿಂದ ವಿವಾದ ಬೆಳೆಯುತ್ತದೆ. ಇಂತದ್ದನ್ನು ನಾನು ನಿಮ್ಮಿಂದ ನಿರೀಕ್ಷೆ ಮಾಡಿರಲಿಲ್ಲ. ನನಗೇನು ಮುಖ್ಯಮಂತ್ರಿಗಿರಿ ಬೇಕಾಗಿಲ್ಲ. ವಾಸ್ತವಸ್ಥಿತಿ ತಿಳಿಯದೇ ನೀವು ಮಾತನಾಡಿದ್ದೀರಿ. ನಾನೇ ಅಪರಾಧ ಮಾಡಿದಂತೆ ಕಾಣುತ್ತೆ. ಅನರ್ಹರನ್ನ ನಂಬಿಸಿ ನಾನು ತಪ್ಪು ಮಾಡಿದ್ದೇನೆ ಎಂಬ ಭಾವನೆ ನನ್ನನ್ನು ಕಾಡುತ್ತಿದೆ ಎಂದು ಮುಖ್ಯಮಂತ್ರಿಗಳು ನೋವು ತೋಡಿಕೊಂಡಿದ್ದಾರೆ.

- ಹುಬ್ಬಳ್ಳಿ ಕೋರ್ ಕಮಿಟಿ ಸಭೆಯ ಮಾತು
- ಧ್ವನಿ ಮುದ್ರಿಕೆಯಿಂದ ಬಹಿರಂಗ
- ಪಕ್ಷದ ಮುಖಂಡರ ವಿರುದ್ಧ ಸಿಎಂ ಕಿಡಿ
- ನಮ್ಮ ನಂಬಿ ಅನರ್ಹರು ಮೂರ್ಖರಾಗಬಾರದು
- ನಾನು ಅಧಿಕಾರಕ್ಕೆ ಅಂಟಿ ಕೂತಿಲ್ಲ